ಶ್ರೀ ಎ. ನಾಗರಾಜ ಶೆಟ್ಟಿ (ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು) :

ಅ) ಚಾಮರಾಜನಗರ ಜಿಲ್ಲೆಗೆ ಕಳೆದ 3 ಸಾಲಿನಲ್ಲಿ ಆರಾಧನಾ ಯೋಜನೆಯಲ್ಲಿ ಕ್ಷೇತ್ರವಾರು ಬಿಡುಗಡೆಯಾದ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ:-

ಕ್ರಮ ಸಂ.	ಕ್ಷೇತ್ರಗಳು	2003-04 (ರೂ.ಗಳಲ್ಲಿ)	2004-05 (ರೂ.ಗಳಲ್ಲಿ)	2005-06 (ರೂ.ಗಳಲ್ಲಿ)
1	ಚಾಮರಾಜನಗರ	53,571.00	2,82,000.00	2,87,000.00
2	ಕೊಳ್ಳೇಗಾಲ	53,571.00	2,82,000.00	2,87,000.00
3	ಹನೂರು	53,571.00	2,82,000.00	2,87,000.00
4	ಗುಂಡ್ಲುಪೇಟೆ	53,571.00	2,82,000.00	2,87,000.00
5	ಸಂತೇಮರಳ್ಳಿ	53,571.00	2,82,000.00	2,87,000.00
	ಒಟ್ಟು	2,67,855.00	14,10,000.00	14,35,000.00

588 (914) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಕೇಂದ್ರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮುಜರಾಯಿ ಇಲಾಖೆಯ ಅಸಿಸ್ಟೆಂಟ್ ಕಮೀಷನರ್ ಕಛೇರಿಯನ್ನು ಬೆಂಗಳೂರು ಕೇಂದ್ರ ಕಛೇರಿಗೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಚಾಮರಾಜನಗರ ಜಿಲ್ಲೆಯಲ್ಲಿ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಶ್ರೀ ಬಿಳಿಗಿರಿರಂಗಸ್ವಾಮಿ ದೇವಸ್ಥಾನ, ಶ್ರೀ ಚಾಮರಾಜೇಶ್ವರಿ ದೇವಸ್ಥಾನ ಹಾಗೂ ಇನ್ನು 300ಕ್ಕೂ ಹೆಚ್ಚು ದೇವಸ್ಥಾನಗಳು ಇರುವುದರಿಂದ ಚಾಮರಾಜನಗರ ಕೇಂದ್ರ ಸ್ಥಾನದಲ್ಲಿ ಸಹಾಯಕ ಕಮೀಷನರ್ ಕಛೇರಿಯನ್ನು ಪುನಃ ಪ್ರಾರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ. ನಾಗರಾಜ ಶೆಟ್ಟಿ (ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು) :

ಅ) ಹೌದು.

ಆ) ಶ್ರೀ ಮಲೆಮಹದೇಶ್ವರ ದೇವಾಲಯದ ಆಡಳಿತ ನಿರ್ವಹಣೆಗೆ ಸಮೂಹ "ಎ" ಹಿರಿಯ ವೇತನ ಶ್ರೇಣಿಯ ಪ್ರತ್ಯೇಕ ಕಾರ್ಯನಿರ್ವಹಣಾಧಿಕಾರಿ ಹುದ್ದೆ ಇರುತ್ತದೆ. ಇದನ್ನು ಹೊರತುಪಡಿಸಿ, ಉಳಿದ ದೇವಾಲಯಗಳ ಆಡಳಿತವನ್ನು ಜಿಲ್ಲಾಡಳಿತದ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತಿದೆ. ಹಾಗೂ ಸರ್ಕಾರದ ಆದೇಶ ಸಂ.ಕಂಇ 67 ಮುಸೇವಿ 2001 (ಭಾಗ) ದಿನಾಂಕ:14/12/2004 ರಲ್ಲಿ ಆಯಾಯಾ ಉಪವಿಭಾಗಾಧಿಕಾರಿಗಳಿಗೆ ಕಾಯ್ದೆಯಡಿ ಅಧಿಕಾರವನ್ನು ಪ್ರತ್ಯಾಯೋಜಿಸಿರುವುದರಿಂದ ಚಾಮರಾಜನಗರ ಕೇಂದ್ರ ಸ್ಥಾನದಲ್ಲಿ ಮುಜರಾಯಿ ಸಹಾಯಕ ಕಮೀಷನರ್ ಕಛೇರಿಯನ್ನು ಪುನಃ ಆರಂಭಿಸುವ ಪ್ರಸ್ತಾಪ ಇರುವುದಿಲ್ಲ.